ಕಾರಣಕ್ಕೆ, ಇವತ್ತು ದಿನಗೂಲಿ ನೌಕರರೇನು ಕೆಲಸ ಮಾಡುತ್ತಿದ್ದಾರೋ, ಅವರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ, ಈ ಸುತ್ತೋಲೆಯ ಆಧಾರದ ಮೇಲೆ ಅವರನ್ನು ಕೆಲಸದಿಂದ ತೆಗೆಯುವುದು, ಮತ್ತೊಂದು ಮಾಡುವುದು, ಈ ಪ್ರಕ್ರಿಯೆಗೆ ಅವಕಾಶ ಕೊಡದೆ, ಮಾನವೀಯತೆ ದೃಷ್ಟಿಯಿಂದ ಅವರಿಗೆ ರಕ್ಷಣೆ ಕೊಡುವಂತಹ ಜವಾಬ್ದಾರಿ ನಮ್ಮ ಸರ್ಕಾರಕ್ಕಿದೆ. ಆ ಕೆಲಸವನ್ನು ನಾವು ಮಾಡುತ್ತೇವೆ ಎನ್ನುವಂತಹ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತಿದ್ದೇನೆ. ಎರಡನೆಯದಾಗಿ ಸುಪ್ರೀಂ ಕೋರ್ಟ್‌ನ ಆದೇಶದ ಹಿನ್ನೆಲೆಯಲ್ಲಿ ಇವತ್ತಿನ ನಮ್ಮ ಹಣಕಾಸಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮಾನವೀಯತೆ ದೃಷ್ಟಿಯಿಂದ ನಾವು ಏನು ಮಾಡಬಹುದು ಎಂದು ಯೋಚಿಸುತ್ತೇವೆ.

4.00 P.M.

ಉದಾಹರಣೆಗೆ ನಮ್ಮ ಹಿರಿಯ ಸದಸ್ಯರಿಗೆಲ್ಲಾ ಗೊತ್ತಿದೆ, ಈ ಬಿಸಿ ಊಟದ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ, ಹಂಗಾಮಿಯಾಗಿ ನೌಕರರನ್ನು ತೆಗೆದುಕೊಂಡಿದ್ದೇವೆ, ಈಗಾಗಲೇ ಅಂಗನವಾಡಿ ಕಾರ್ಯಕರ್ತೆಯರು ಸಾವಿರಾರು ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅನೇಕ ಜನ ಹತ್ತಾರು ವರ್ಷಗಳಿಂದ ದಿನಗೂಲಿನಲ್ಲಿ ಕೆಲಸ ಮಾಡುವವರಿಗೆ ನಾವು ಕನ್ಸಾಲಿಡೇಟ್ ರೂ. 2000–3000 ವರೆಗೆ ಕೊಡುತ್ತಿದ್ದೇವೆ, ಅದರಲ್ಲಿ ಎರಡು ಹೊತ್ತು ಊಟ ಮಾಡುವುದಕ್ಕಾಗುವುದಿಲ್ಲವೆನ್ನುವ ಅರಿವು ನನಗಿದೆ, ಅಲ್ಲಿ ಕುಳಿತಾಗ ನಾನೇನು ಮಾತನಾಡಿದ್ದೇನೆ, ಎನ್ನುವ ಅರಿವು ಇಲ್ಲಿ ಕುಳಿತು ಮಾತನಾಡುವಾಗಲೂ ಇದೆ. ಆದರೆ ಇವತ್ತು ಹಣಕಾಸಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಸುಪ್ರೀಂಕೋರ್ಟ್ ಆದೇಶ ಹಿನ್ನೆಲೆಯಲ್ಲಿ ಇವರಿಗೆ ತೊಂದರೆಯಾಗದ ರೀತಿಯಲ್ಲಿ ಯಾವ ಕ್ರಮವನ್ನು ನಾವು ತೆಗೆದುಕೊಳ್ಳಬೇಕೆಂಬ ಬಗ್ಗೆ ಚಿಂತನೆ ಮಾಡುತ್ತೇವೆ ಮತ್ತೆ ನಮ್ಮ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದು, ಈ ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರುವ ಸುತ್ತೋಲೆಯ ಬಗ್ಗೆ ಕ್ರಮ ತೆಗೆದುಕೊಂಡು ದಿನಗೂಲಿ ನೌಕರರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ, ಆ ಹಿನ್ನೆಲೆಯಲ್ಲಿ ತಮ್ಮ ಬೇಡಿಕೆಯನ್ನು ಈಡೇರಿಸಬೇಕೆಂದು ಬೆಂಗಳೂರಿನಲ್ಲಿ ಸತ್ಯಾಗ್ರಹ ಮಾಡಬೇಕೆಂದು ಬಂದಿದ್ದಾರೆ, ಅವರು ವಾಪಸ್ ಹೋಗಿ ಅವರ ಕೆಲಸಕಾರ್ಯಗಳನ್ನು ನಿರ್ವಹಿಸಲಿ. ಈ ಬಗ್ಗೆ ಸಹಾನುಭೂತಿಯಿಂದ ಸರ್ಕಾರ ಪರಿಶೀಲನೆ ಮಾಡುತ್ತದೆ ಎನ್ನುವ ಭರವಸೆಯನ್ನು ನಾನು ಈ ಮನೆಯ ಮೂಲಕ ಅಲ್ಲಿ ಸತ್ಯಾಗ್ರಹ ಮಾಡುತ್ತಿರುವಂತಹ ಹಾಗೂ ಸಾವಿರಾರು ಸಂಖ್ಯೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿರುವ ನೌಕರರಿಗೆ ಕೊಡಲು ನಾನು ಇಷ್ಟಪಡುತ್ತೇನೆ.

(ಇ) **ವಿಷಯ** : ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತುಳು ಸರ್ಟಿಫಿಕೇಟ್ ನೀಡುವ ಬಗ್ಗೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಈಗ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯನ್ನು ತುಳು ನಾಡೆಂದೇ ಕರೆಯುತ್ತಾರೆ. ಆದರೆ ಹಿಂದೆ ಯಾರಿಗೂ

ಲಿಂಗ್ವಿಸ್ಟಿಕ್ ಮೈನಾರಿಟಿ ಇನ್‌ಸ್ಟಿಟ್ಯೂಷನ್ ಕೊಡುತ್ತಾರೆಂದು ಅಂದಾಜು ಇರಲಿಲ್ಲ. ಶಾಲಾ ಸರ್ಟಿಫಿಕೇಟ್‌ಗಳಲ್ಲಿ ಮಾತೃಭಾಷೆ ಕನ್ನಡವೆಂದೇ ಶಿಕ್ಷಕರು ಬರೆಯುತ್ತಿದ್ದರು. ಇವತ್ತು ತುಳು ಸರ್ಟಿಫಿಕೇಟ್ ಕೇಳಿದರೆ, ಶಾಲಾ ದಾಖಲಾತಿಗಳಲ್ಲಿ ಕನ್ನಡ ಇರುವುದರಿಂದ ತುಳು ಮಾತೃಭಾಷೆ ಎಂದು ಕೊಡುವುದಕ್ಕಾಗುತ್ತಿಲ್ಲವೆಂದು ಕಂದಾಯ ಇಲಾಖೆಯ ಅಧಿಕಾರಿಗಳು ಹೇಳುತ್ತಿದ್ದಾರೆ. ಆದುದರಿಂದ ಇವತ್ತು ಲಿಂಗ್ವಿಸ್ಟಿಕ್ ಮೈನಾರಿಟಿ ಇನ್‌ಸ್ಟಿಟ್ಯೂಷನ್‌ನಲ್ಲಿ ಅಂದರೆ ತುಳು ಭಾಷೆಯ ಇನ್‌ಸ್ಟಿಟ್ಯೂಷನ್ಸ್‌ಗಳಲ್ಲಿ ಅಲ್ಲಿ ಈ ಕಾರಣಗಳಿಂದ ಸೀಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಅದಕ್ಕೋಸ್ಕರ ನಾನು ಸರ್ಕಾರವನ್ನೇನು ಕೇಳುತ್ತಿದ್ದೇನೆಂದರೆ, ಅವರ ಅಧಿಕಾರಿಗಳಿಗೆ ಇನ್‌ಸ್ಟ್ರಕ್ಷನ್ ಅನ್ನು ಕೊಡಬೇಕು, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾರ್ಯಾರು ಮಕ್ಕಳ ಶಾಲಾ ದಾಖಲಾತಿಗಳಲ್ಲಿ ಕನ್ನಡವೆಂದಿದೆ ಅವರಿಗೆ ತುಳು ಸರ್ಟಿಫಿಕೇಟ್ ಕೇಳಿದರೆ ತುಳು ಸರ್ಟಿಫಿಕೇಟ್ ಕೊಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮುಖೇನ ಕೇಳುವುದ ಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಮಾತೃಭಾಷೆ ಎಂಬುದು ನಿಜ. ಆದರೆ ತುಳು ಹಾಗೂ ಕೊಂಕಣಿ ಭಾಷೆಗಳಿಗೆ ಲಿಪಿ ಇಲ್ಲ, ಕೊಡವ ಭಾಷೆಗೂ ಲಿಪಿ ಇಲ್ಲ, ಅಲ್ಲಿ ಎಲ್ಲರೂ ಕನ್ನಡವನ್ನು ಕಲಿಯುತ್ತಾರೆ. ಆದರೆ ಇತ್ತೀಚೆಗೆ ತುಳು ಮಾತೃಭಾಷೆ ಅನ್ನುವುದಾಗಿದ್ದರೆ, ಅಲ್ಪಸಂಖ್ಯಾತರ ಕಾಲೇಜುಗಳಲ್ಲಿ ಸೇರುವಂತಹ ಅವಕಾಶಗಳಿರುತ್ತವೆ, ಮೊದಲು ಕನ್ನಡವೆಂದು ಸೇರಿಸಿರುವುದನ್ನು ನೀವು ಬದಲಿಸಬೇಕು ಎಂಬುದನ್ನು ಮಾನ್ಯ ಶಾಸಕರು ತಮ್ಮ ಆಸೆಯನ್ನು ವ್ಯಕ್ತಪಡಿಸಿದ್ದಾರೆ, ಅದಕ್ಕೆ ಬೇರೆ ರೀತಿಯಾದ ಅಭಿಪ್ರಾಯಗಳಿಲ್ಲ. ಆದುದರಿಂದ ಈ ವಿಚಾರದಲ್ಲಿ ಸರ್ಕಾರ, ನಾವು ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಸೂಕ್ತವಾದ ಒಂದು ನಿರ್ಧಾರವನ್ನು ಪ್ರಕಟಣೆ ಮಾಡುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ಸರ್, ಅದು ಬರೀ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗಷ್ಟೇ ಅಲ್ಲ, ಉಡುಪಿ, ಹಾಗೂ ದಕ್ಷಿಣ ಕನ್ನಡ ಜಿಲ್ಲೆಯವರು ಬೇರೆ ಬೇರೆ ಜಿಲ್ಲೆಗಳಲ್ಲೂ ಬಂದು ಬಿಟ್ಟಿದ್ದಾರೆ, ವಿಶೇಷವಾಗಿ ಹೋಟೆಲ್ ಉದ್ಯಮದವರು, ಅವರಿಗೂ ಈ ಅವಕಾಶ ಸಿಗುವಂತೆ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಅವರಲ್ಲೇ ಕೂಡ ಈಗ ಕುಂದಾಪುರದಲ್ಲಿ ಇರುವುದು ಕನ್ನಡವೇ ಮಾತೃಭಾಷೆ ತುಳು ಇರುವುದಿಲ್ಲ. ಹಳ್ಳಿಗಳಲ್ಲಿ ಹೋದರೂ, ಕೂಡ ಅಲ್ಲಿ ಒಂದು ತರಹದ ಕನ್ನಡವಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಆದರೆ ಇವತ್ತು ಏನಾಗಿದೆ ಎಂದರೆ ಕನ್ನಡದವರು ತುಳುವರನ್ನು ಮದುವೆಯಾಗಿದ್ದಾರೆ, ತುಳುವರು ಕನ್ನಡದವರನ್ನು ಮದುವೆಯಾಗಿ ಅಲ್ಲೂ ಕೂಡ

ಮಾತೃಭಾಷೆ ತುಳು ಕಲಿತವರೇ ಆಗಿದ್ದಾರೆ. ಕುಂದಾಪುರದಲ್ಲಿ ಕನ್ನಡ ಮಾತನಾಡುವವರು ತುಳುಮಾತನಾಡುವ ಹೆಣ್ಣನ್ನು ತಂದಾಗ ಮಾತೃಭಾಷೆ ತುಳುವೇ ಆಗುತ್ತದೆ. ಕನ್ನಡ ಆಗಲಿಕ್ಕೆ ಆಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ತಮಗೆ ಗೊತ್ತಿದೆ, ಕಾನೂನಿನ ಪ್ರಕಾರ, ಯಾರು ಹೆಂಡತಿಯಾಗಿರುತ್ತಾಳೆ, ಆ ಗಂಡನ ವಂಶದ ಹೆಸರನ್ನು ತೆಗೆದುಕೊಳ್ಳುತ್ತಾಳೆ, ಆ ಆಸ್ತಿಗೆ ಆಕೆ ಹಕ್ಕುದಾರಳಾಗಿರುತ್ತಾಳೆ, ಆಕೆಯ ಭಾಷೆಯನ್ನೇ ನಾವು ಮಾತೃಭಾಷೆ ಎಂದು ಕರೆದರೂ ಕೂಡ ಅದು ತಂದೆ ಭಾಷೆಯೇ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಒಂದು ಮಗುವಿಗೆ ತುಳು ಸರ್ಟಿಫಿಕೇಟ್ ಕೊಟ್ಟಿದ್ದಾರೆ, ಎರಡನೆಯದಕ್ಕೆ ಕೇಳುವಾಗ ಇಲ್ಲ ಸ್ಕೂಲ್ ಸರ್ಟಿಫಿಕೇಟ್‌ನಲ್ಲಿ ಈ ರೀತಿಯಾಗಿದೆ ಎಂದು ಹೇಳುತ್ತಾರೆ. ಅದಕ್ಕೋಸ್ಕರ ಅದನ್ನು ಹೊಂದಾಣಿಕೆ ಮಾಡಬೇಕು. ಏಕೆಂದರೆ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಮದುವೆಯಾದ್ದರಿಂದ ತುಳು ಭಾಷೆಯನ್ನು ಈಗ ಎಲ್ಲರೂ ಕಲಿತಿರುತ್ತಾರೆ, ಮಾತೃಭಾಷೆ ತುಳುವಾಗಿರುತ್ತದೆ. ಅದನ್ನು ಸ್ವಲ್ಪ ಪರಿಗಣಿಸಬೇಕು.

(ಈ) **ವಿಷಯ** :ಉಡುಪಿ ತಾಲ್ಲೂಕಿನ ಕೋಟಾ–ಮಣೂರು ಗ್ರಾಮದಲ್ಲಿ ನಡೆದ ಕೋಮುಗಲಭೆ ಬಗ್ಗೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಕೋಟ ತಟ್ಟು ಪಡುಕೆರೆಯಲ್ಲಿ ಇತ್ತೀಚೆಗೆ ಕೋಮುಗಲಭೆಯಾಯಿತು. ನಿಜವಾಗಿ ಹೇಳಬೇಕಾದರೆ ಅದು ಕೋಮುಗಲಭೆಯಾಗಿ ಆರಂಭವಾಗಲಿಲ್ಲ. ವೈಯಕ್ತಿಕ ದ್ವೇಷದಿಂದ ಒಂದು ಗಲಾಟೆಯಿಂದ ಆರಂಭವಾಯಿತು. ನಂತರ ಅದು ಪರ್ಸನಲ್ ಕ್ಲ್ಯಾಷ್ ಆಗಿ ಕಮ್ಯುನಲ್ ಕ್ಲ್ಯಾಷ್ ಆಯಿತು, ರಾತ್ರಿ 11.00 ಗಂಟೆಯಾಗುವಾಗ ಪೊಲಿಟಿಕಲ್ ಟರ್ನ್ ತೆಗೆದುಕೊಂಡಿತು. ಯಾರಿಗೆ ಯಾರನ್ನು ಕಂಡರಾಗುವುದಿಲ್ಲವೋ ಅವರವರ ಮೇಲೆ ದೂರನ್ನು ಕೊಟ್ಟು ಎರಡು ಮೂರು ದಿವಸಗಳ ಕಾಲ ಅಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು; ಇವತ್ತು ಶಾಂತವಾತಾರಣ ಉಂಟಾಗಿದೆ. ನಾನು ಸರ್ಕಾರವನ್ನು ಕೇಳುವುದೇನೆಂದರೆ, ಯಾವುದೇ ವರ್ಗಕ್ಕೆ ಸೇರಿರಲಿ, ಯಾರ್ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಬೇಕಾಗುತ್ತದೆ. ಮತ್ತೆ ಕೆಲವು ನಿರಾಪರಾಧಿಗಳ ಮೇಲೆ ರಾಜಕೀಯ ದ್ವೇಷದಿಂದ ಏನು ದೂರನ್ನು ಕೊಟ್ಟಿದ್ದಾರೋ ತನಿಖೆಯನ್ನು ಮಾಡಿ ಅವರ ಮೇಲಿನ ದೂರನ್ನು ತೆಗೆಯಬೇಕು. ತಪ್ಪಿತಸ್ಥರ ಮೇಲೆ ಶಿಕ್ಷೆ ವಿಧಿಸಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ದಿನಾಂಕ 11.06.2006 ರಂದು 20–00 ಗಂಟೆ ಸಮಯಕ್ಕೆ ಕೋಟತಟ್ಟು ಪಡುಕೆರೆಯಲ್ಲಿ ಎರಡು ಸಮುದಾಯದ ಜನರ ನಡುವೆ ಗಲಾಟೆ ನಡೆಯುತ್ತಿದೆ ಎಂದು ಸ್ಥಳೀಯ ದೂರವಾಣಿ ಮುಖಾಂತರ ಕೋಟಾ ಪೊಲೀಸ್ ಠಾಣೆಗೆ ತಿಳಿಸಿದ್ದು, ಕೋಟಾ ಠಾಣಾ ಪಿಎಸ್‌ಐ ಹಾಗೂ ಸಿಬ್ಬಂದಿಯವರು